ಶಿವಾನಂದ ಸರ್ಕಲ್ ಸ್ಟೀಲ್ ಬ್ರಿಡ್ಜ್ ಅವೈಜ್ಞಾನಿಕ: ತಜ್ಞರ ಅಭಿಪ್ರಾಯ

ಅಗತ್ಯಕ್ಕೆ ತಕ್ಕಂತೆ ಕತ್ತರಿಸದ ರೇಸ್ ಕೋರ್ಸ್ ರಸ್ತೆಯಲ್ಲಿನ ಮೀಡಿಯನ್ | ಅಪಘಾತಕ್ಕೆ ಆಹ್ವಾನ: ವಾಹನ ಸವಾರರಿಗೆ ಅಶ್ವಗಳ ಪ್ರತಿಮೆ ಅಡ್ಡಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜಕೀಯ ಕಾರಣಗಳಿಂದಾಗಿಯೇ ಭಾರಿ ಚರ್ಚೆಗೆ ಗ್ರಾಸವಾಗಿದ್ದ ಶಿವಾನಂದ ಸರ್ಕಲ್‌ನ ಸ್ಟೀಲ್ ಬ್ರಿಡ್ಜ್ ಐದು ವರ್ಷಗಳ ಬಳಿಕ ವಾಹನಗಳ ಓಡಾಟಕ್ಕೆ ಮುಕ್ತವಾಗಿದ್ದರೂ, ಈ ರಸ್ತೆ ಈಗಲೂ ಸರಿಯಾಗಿಲ್ಲ ಎನ್ನುವ ಮಾತನ್ನು ಸಂಚಾರಿ ತಜ್ಞರು ಹೇಳುತ್ತಿದ್ದಾರೆ.

ಈ ಜಂಕ್ಷನ್‌ನ್ನು ಅವೈಜ್ಞಾನಿಕವಾಗಿ ನಿರ್ಮಿಸಿದ್ದು, ಅಪಘಾತಕ್ಕೆ ಆಹ್ವಾನ ನೀಡುವಂತಿದೆ ಎಂದು ಸಂಚಾರಿ ತಜ್ಞರು ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ. ಶಿವಾನಂದ ಸರ್ಕಲ್‌ನ ಸ್ಟೀಲ್ ಬ್ರಿಡ್ಜ್ ನಿಗದಿತ ಸಮಯಕ್ಕಿಂತ ಐದು ವರ್ಷ ತಡವಾಗಿ ಪೂರ್ಣಗೊಂಡು ಸಾರ್ವಜನಿಕ ವಾಹನಗಳಿಗೆ ಮುಕ್ತವಾದರೂ, ಶೇಷಾದ್ರಿಪುರ ಹಾಗೂ ರೇಸ್ ಕೋರ್ಸ್ ಕಡೆಯಿಂದ ಬಂದು ಹೋಗುವ ಮಧ್ಯದ ಜಂಕ್ಷನ್ ಅವೈಜ್ಞಾನಿಕವಾಗಿ ನಿರ್ಮಿಸಿರುವುದು ಅಪಘಾತಕ್ಕೆ ಆಹ್ವಾನ ನೀಡುವಂತಿದೆ.

ಈ ಸೇತುವೆ ಕಡೆಗೆ ಬಂದು ಹೋಗುವ ವಾಹನಗಳು ಸುಗಮವಾಗಿ ಸಾಗುವಂತೆ ರೇಸ್ ಕೋರ್ಸ್ ರಸ್ತೆಯ ಜಂಕ್ಷನ್‌ನಲ್ಲಿನ ಮೀಡಿಯನ್‌ನನ್ನು ಅಗತ್ಯಕ್ಕೆ ತಕ್ಕಂತೆ ಕತ್ತರಿಸಿಲ್ಲ. ಹೀಗಾಗಿ ರೇಸ್ ಕೋರ್ಸ್ ರಸ್ತೆಯಿಂದ ಶೇಷಾದ್ರಿಪುರ ಕಡೆಗೆ ಬಲಕ್ಕೆ ತಿರುಗಿ ಸಾಗುವ ವಾಹನಗಳು ವಕ್ರವಾಗಿ ಸೇತುವೆಯನ್ನು ಹತ್ತಬೇಕಾಗಿದೆ. ಹೀಗೆ ಹತ್ತುವ ಸಂದರ್ಭದಲ್ಲಿ ಮೇಲ್ಸೇತುವೆ ವಕ್ಕದ ಇಂಟರ್ ಮೀಡಿಯೇಟ್ ಸ್ಲಿಪ್ ರಸ್ತೆ ಮಧ್ಯದ ಭಾಗಕ್ಕೆ ಡಿಕ್ಕಿ ಹೊಡೆಯುವ ಸಾಧ್ಯತೆಯಿದೆ.

ಶೇಷಾದ್ರಿಪುರ ಜಂಕ್ಷನ್‌ನಲ್ಲಿ ಸಮಸ್ಯೆ: ರೇಸ್ ಕೋರ್ಸ್ ಕಡೆಯಿಂದ ಬಲಕ್ಕೆ ತಿರುಗಿ ಶೇಷಾದ್ರಿಪುರ ಕಡೆಗೆ ಸಾಗುವ ಹಾದಿಯಲ್ಲಿ ಈ ಹಿಂದೆ ಇದ್ದ ಜಂಕ್ಷನ್‌ನಲ್ಲಿ ಅಶ್ವಗಳ ಪ್ರತಿಮೆಯಿಂದಾಗಿ ವಾಹನ ಸವಾರರಿಗೆ ಮೇಲ್ಸೇತುವೆ ಹಾಗೂ ಆ ರಸ್ತೆಗೆ ತಾಗಿದಂತೆ ಬಲ ಬದಿಯಲ್ಲಿ ಹಾಕಿರುವ ದೊಡ್ಡ ಸೈನ್ ಬೋರ್ಡ್ ಸರಿಯಾಗಿ ಕಾಣುವುದಿಲ್ಲ. ಇಂಡಿಯನ್ ರೋಡ್ ಕಾಂಗ್ರೆಸ್ ನಿಯಮಗಳ ಪ್ರಕಾರ ಮೀಡಿಯನ್ ಜಂಕ್ಷನ್‌ಗಳಲ್ಲಿ ವಾಹನಗಳ ವೇಗವನ್ನು ಕಡಿಮೆ ಮಾಡಿ ಸುಮಗವಾಗಿ ವಾಹನ ಸಂಚಾರಕ್ಕಾಗಿ ವೃತ್ತಗಳನ್ನು ಮಾಡಿರುತ್ತಾರೆ. ಆದರೆ, ರೇಸ್‌ಕೋರ್ಸ್ ರಸ್ತೆಯಲ್ಲಿನ ಶಿವಾನಂದ ವೃತ್ತದ ಟ್ರೈ ಓವರ್ ಜಂಕ್ಷನ್ ಅಪಾಯಕ್ಕೆ ಆಹ್ವಾನ ನೀಡುವಂತಿದೆ ಎನ್ನುತ್ತಾರೆ ತಜ್ಞರು.

ರೇಸ್ ಕೋರ್ಸ್ ರಸ್ತೆಯಿಂದ ಶೇಷಾದ್ರಿಪುರ ಕಡೆಗೆ ಸಾಗುವ ವಾಹನ ಸವಾರರು ಹಾಗೂ ಮಲ್ಲೇಶ್ವರ ಕಡೆಯಿಂದ ಅದೇ ಮೇಲ್ಸೇತುವೆ ದಾಟಿ ಬಲಕ್ಕೆ ತಿರುಗಿ ಮೆಜಿಸ್ಟಿಕ್ ಕಡೆ ಸಾಗುವ ವಾಹನ ಸವಾರರಿಗೆ ಅವೈಜ್ಞಾನಿಕವಾಗಿ ಜಂಕ್ಷನ್ ನಿರ್ಮಾಣದಿಂದ ಸಮಸ್ಯೆಯಾಗುತ್ತಿದೆ ಎಂಬ ಆರೋಪಗಳೂ ಕೇಳಿಬರುತ್ತಿವೆ.

ಪದೇ ಪದೆ ಯೋಜನೆ ಬದಲಾವಣೆ

326 ಮೀ. ಉದ್ದದ ಸೇತುವೆ ನಂತರ 450 ಮೀಟರ್‌ಗೆ ಏರಿಕೆಯಾಗಿತ್ತು. ಈ ಮೊದಲಿಗೆ ಉಕ್ಕಿನ ಸೇತುವೆಯ ಉದ್ದ ಕೇವಲ 36 ಮೀಟರ್ ಇದ್ದುದನ್ನು 460 ಮೀಟರ್‌ಗೆ ಹೆಚ್ಚಿಸಲಾಗಿತ್ತು. ಇದರಿಂದ 19.85 ಕೋಟಿ ರು. ಇದ್ದ ಕಾಮಗಾರಿಯ ವೆಚ್ಚ 40 ಕೋಟಿ ರು.ಗೆ ಏರಿಕೆಯಾಯಿತು. ನಾಲ್ಕು ಲೇನ್‌ಗಳ ಈ ಸ್ಟೀಲ್ ಮೇಲ್ಸೇತುವೆ ಒಟ್ಟು 15 ಮೀಟರ್ ಅಗಲವಿದೆ. ಕಾಮಗಾರಿ ಪೂರ್ಣಗೊಂಡು ವಾಹನಗಳ ಓಡಾಟ ಆರಂಭವಾಗಿ ಎರಡು ತಿಂಗಳಿಗೂ ಹೆಚ್ಚು ಕಾಲವಾಗಿದೆ. ಆದರೆ ಮೇಲ್ಸೇತುವೆ ಕಡೆಗಿನ ರೇಸ್ ಕೋರ್ಸ್ ಜಂಕ್ಷನ್‌ನ ಅವೈಜ್ಞಾನಿಕ ವಿನ್ಯಾಸವನ್ನು ಕೂಡಲೇ ಸರಿಪಡಿಸಿದರೆ ಉತ್ತಮ ಎಂಬ ಅಭಿಪ್ರಾಯ ನಾಗರಿಕ ವಲಯದಿಂದ ಕೇಳಿಬಂದಿದೆ.

ಪ್ರಯಾಣಿಕನ ಬಳಿ ಗನ್ ಪತ್ತೆ

ಬೆಂಗಳೂರು: ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಕುವೈತ್‌ಗೆ ಹೋಗುತ್ತಿದ್ದ ಪ್ರಯಾಣಿಕನ ಬಳಿ 5 ಗುಂಡುಗಳನ್ನು ತುಂಬಿದ್ದ ಪಿಸ್ತೂಲ್ ಪತ್ತೆಯಾಗಿರುವುದು ತಡವಾಗಿ ಬೆಳಕಿಗೆ ಬಂದಿದೆ.

ಚನ್ನಕೇಶವನಗರದ ಶ್ರೀನಿವಾಸ ಎಂಬಾತ ಕಳೆದ ನ.18ರ ಮು.12:30 ಸಮಯದಲ್ಲಿ ದೇವನಹಳ್ಳಿಯ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿದ್ದರು. ಜೆ9-432 ವಿಮಾನದಲ್ಲಿ ಕುವೈತ್ ಪ್ರಯಾಣಿಸಲು ಬಂದಿದ್ದ ಶ್ರೀನಿವಾಸ ಲೈನ್ ನಂಬರ್ 18 ರಲ್ಲಿ ಸಿಐಎಸ್‌ಎಫ್ ಸಿಬ್ಬಂದಿ ತಪಾಸಣೆ ಮಾಡಿದಾಗ ಶ್ರೀನಿವಾಸ ಅವರ ಲಗೇಜ್‌ನಲ್ಲಿ ಪಿಸ್ತೂಲ್ ಪತ್ತೆಯಾಗಿದೆ. ಚೆಕೊಸ್ಲೊವೇಕಿಯಾದಲ್ಲಿ ತಯಾರದ 6.35 ಬೋರ್ ಪಿಸ್ತೂಲ್ ಆಗಿದ್ದು, 5 ಗುಂಡುಗಳನ್ನು ಪಿಸ್ತೂಲ್‌ನಲ್ಲಿ ಲೋಡ್ ಮಾಡಲಾಗಿತ್ತು. ಶ್ರೀನಿವಾಸ ಅವರ ಬಳಿ ಸಮರ್ಪಕವಾದ ದಾಖಲೆಗಳು ಇಲ್ಲದ ಹಿನ್ನೆಲೆ ಆರ್ಮ್ಸ್ ಆಕ್ಟ್ 1959 ಅಡಿ ವಿಮಾನ ನಿಲ್ದಾಣದಲ್ಲಿ ಪ್ರಕರಣ ದಾಖಲಾಗಿದೆ.

ಸಮಾಚಾರ ಸಣ್ಣದಲ್ಲ

ಗೀತಾ ಸಿ.ಎಸ್‌ಗೆ ಪಿಎಚ್.ಡಿ ಪ್ರದಾನ

ಬೆಂಗಳೂರು: ವಿಶ್ವವಿದ್ಯಾಲಯದ ಸಂಶೋಧನಾ ವಿದ್ಯಾರ್ಥಿನಿ ಗೀತಾ ಸಿ.ಎಸ್. ಮಂಡಿಸಿದ 'ಅವೇರ್‌ನೆಸ್ ಅಂಡ್ ಆ್ಯಟಿಟ್ಯೂಡ್ ಟುವರ್ಡ್ಸ್ ಐಪಿಆರ್ ಅಂಡ್ ಪ್ಲಾಗಿಯಾರಿಸಮ್ ಇಷ್ಯೂಸ್ ಅಮಾಂಗ್ ದಿ ಫಾಕಲ್ಟಿ ಮೆಂಬರ್ಸ್ ಅಂಡ್ ರೀಸರ್ಚ್ ಸ್ಕಾಲರ್ಸ್ ಆಫ್ ಸ್ಟೇಟ್ ಅಂಡ್ ಪ್ರೈವೇಟ್ ಯೂನಿವರ್ಸಿಟೀಸ್ ಇನ್ ಬೆಂಗಳೂರು ಮೈಸೂರು ಎ ಸ್ಟಡಿ' ಕುರಿತ ಸಂಶೋಧನಾ ಪ್ರಬಂಧಕ್ಕೆ ಬೆಂಗಳೂರು ವಿವಿ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ. ವಿಶ್ವವಿದ್ಯಾಲಯದ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ಪ್ರೊ. ರಮೇಶ್ ಅವರ ಮಾರ್ಗದರ್ಶನದಲ್ಲಿ ಅವರು ಪ್ರಬಂಧ ಮಂಡಿಸಿದ್ದರು.

48 ವಾರ್ಡ್‌ಗಳಲ್ಲಿ ಗುಂಡಿ ಕಾರ್ಯ ಪೂರ್ಣ

ಬೆಂಗಳೂರು: ಪಾಲಿಕೆಯ ದಕ್ಷಿಣ ವಲಯ ವ್ಯಾಪ್ತಿಯ ಆರು ವಿಧಾನಸಭಾ ಕ್ಷೇತ್ರಗಳಲ್ಲಿ 48 ವಾರ್ಡ್‌ಗಳಲ್ಲಿ ರಸ್ತೆ ಗಂಡಿಗಳನ್ನು ಮುಚ್ಚಲಾಗಿದೆ ಎಂದು ಪಾಲಿಕೆ ತಿಳಿಸಿದೆ. 48 ಹೊಸ ವಾರ್ಡ್ ಗಳ ವ್ಯಾಪ್ತಿಯಲ್ಲಿರುವ ಎಲ್ಲಾ ಆರ್ಟೀರಿಯಲ್, ಸಬ್-ಆರ್ಟೀರಿಯಲ್ ಮತ್ತು ವಾರ್ಡ್ ರಸ್ತೆಗಳಲ್ಲಿ ಇದ್ದ ರಸ್ತೆ ಗುಂಡಿಗಳನ್ನು ಮುಚ್ಚಲಾಗಿದ್ದು, ರಸ್ತೆ ಗುಂಡಿಗಳು ಕಂಡುಬಂದಲ್ಲಿ ನೇರವಾಗಿ ದಕ್ಷಿಣ ವಲಯದ ನಿಯಂತ್ರಣ ಕೊಠಡಿಯ ದೂರವಾಣಿ ಸಂಖ್ಯೆ: 26566362/ 22975703ಗೆ ಸಾರ್ವಜನಿಕರು ದೂರನ್ನು ದಾಖಲಿಸುವಂತೆ ದಕ್ಷಿಣ ವಲಯ ಆಯುಕ್ತ ಜಯರಾಮ್ ರಾಯಪುರ ತಿಳಿಸಿದ್ದಾರೆ.

ಬಿಎಂಟಿಸಿಯಿಂದ 7.1 ಲಕ್ಷ ದಂಡ ವಸೂಲಿ

ಬೆಂಗಳೂರು: ಬಿಎಂಟಿಸಿ ವಿವಿಧ ಪ್ರಕರಣಕ್ಕೆ ಸಂಬಂಧಿಸಿದಂತೆ ಅಕ್ಟೋಬರ್ ತಿಂಗಳಲ್ಲಿ ಪ್ರಯಾಣಿಕರಿಂದ 7.1 ಲಕ್ಷ ರು. ದಂಡ ವಸೂಲಿ ಮಾಡಿದೆ. ಬಿಎಂಟಿಸಿ ಬಸ್‌ನಲ್ಲಿ ಟಿಕೆಟ್ ರಹಿತ ಪ್ರಯಾಣ ಸೇರಿದಂತೆ ವಿವಿಧ ಪ್ರಕರಣಗಳಲ್ಲಿ ಅಕ್ಟೋಬರ್ ತಿಂಗಳೊಂದರಲ್ಲೇ 3675 ಮಂದಿಯಿಂದ 7.1 ಲಕ್ಷ ದಂಡ ವಸೂಲಿ ಮಾಡಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ. ಬಸ್‌ನಲ್ಲಿ ಸಂಸ್ಥೆಯ ಆದಾಯ ಸೋರಿಕೆ ತಡೆಗಟ್ಟುವ ಹಿನ್ನೆಲೆ ಸಂಸ್ಥೆಯು ತನಿಖೆ ನಡೆಸಿದ್ದು, 3498 ಟಿಕೆಟ್ ರಹಿತ ಪ್ರಯಾಣಿಕರನ್ನು ಪತ್ತೆಹಚ್ಚಿ 6.92 ಲಕ್ಷ ರು. ದಂಡ ವಸೂಲಿ ಮಾಡಿದೆ. ಕರ್ತವ್ಯ ನಿರ್ಲಕ್ಷ್ಯ ಹಿನ್ನೆಲೆ 1680 ಪ್ರಕರಣ ದಾಖಲಾಗಿದೆ.

ಕನ್ನಡ ಎಂಎ: ರ‍್ಯಾಂಕ್ ಪಟ್ಟಿ ಪ್ರಕಟ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾನಿಲಯದ ಎಂಎ ಕನ್ನಡದ ವಿಭಾಗದ 2020-21ನೇ ಸಾಲಿನ ರ‍್ಯಾಂಕ್ ಪಟ್ಟಿ ಪ್ರಕಟವಾಗಿದೆ. ಸಿಬಿಎಸ್‌ಸಿ ಸ್ಕೀಮ್ ಅನ್ವಯ ಪರೀಕ್ಷೆ ನಡೆದಿದ್ದು, ನಾಲ್ಕು ಸೆಮಿಸ್ಟರ್ ಪರೀಕ್ಷೆಗಳ ಸರಾಸರಿ ಆಧಾರದಲ್ಲಿ ರ‍್ಯಾಂಕ್ ನೀಡಲಾಗಿದೆ. ಬೆಂಗಳೂರಿನ ವಿಜಯನಗರದ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳಾದ ಕೀರ್ತಿ ನೇಗಿನಾಗ್ ಮತ್ತು ರಮೇಶ ಕೆ.ಸಿ ಕ್ರಮವಾಗಿ ಮೊದಲ ಮತ್ತು ಐದನೇ ರ‍್ಯಾಂಕ್ ಪಡೆದಿದ್ದಾರೆ. ಗಣೇಶ್ ಮೂರ್ತಿ-ಎರಡು, ಅಶ್ವಿನಿ ಬಿ-ಮೂರು, ಮಾಲಾಶ್ರೀ- ನಾಲ್ಕನೇ ರ‍್ಯಾಂಕ್ ಪಡೆದಿದ್ದಾರೆ. ಅವರಿತ ಪರಿಶ್ರಮ ಮತ್ತು ಅಧ್ಯಯನದಿಂದಾಗಿ ರ‍್ಯಾಂಕ್ ಪಡೆದ ಎಲ್ಲ ವಿದ್ಯಾರ್ಥಿಗಳಿಗೆ ವಿವಿಯ ಕುಲಪತಿ, ಕುಲಸಚಿವ ಮತ್ತು ಅಧ್ಯಾಪಕರು ಶುಭಾಶಯ ತಿಳಿಸಿದ್ದಾರೆ.

{ಬಸವರಾಜ ಬೊಮ್ಮಾಯಿ} ಮುಖ್ಯಮಂತ್ರಿ

> ಮುರುಘಾ ಮಠದ ಆಡಳಿತಾತ್ಮಕ ಕಾರ್ಯವೈಖರಿಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿ ನೀಡಿದ ವರದಿ ಕಾನೂನು ಇಲಾಖೆಯಲ್ಲಿದ್ದು, ಸರ್ಕಾರ ಶೀಘ್ರ ನಿರ್ಧಾರ ಕೈಗೊಳ್ಳಲಿದೆ. ಮುರುಘಾ ಮಠದ ಶಿವಮೂರ್ತಿ ಶರಣರ ವಿರುದ್ಧ ಪಿತೂರಿ ನಡೆದಿದೆ ಎನ್ನಲಾದ ಪ್ರಕರಣವನ್ನು ಪೊಲೀಸರು ತನಿಖೆ ಮಾಡುತ್ತಿದ್ದಾರೆ. ಈ ಹಂತದಲ್ಲಿ ಪ್ರತಿಕ್ರಿಯೆ ನೀಡುವುದಿಲ್ಲ.



ಕಾಶ್ಮೀರ ಕಂಡಂತಹ ಸಂತೋಷ

ಕಾಶ್ಮೀರದ ಸುಂದರ ತಾಣಗಳ ಬಗ್ಗೆ ಸಂತೋಷ್ ಮೆಹಂದಳೆ ಮಾತು | ಭೂಲೋಕದ ಸ್ವರ್ಗದ ಕುರಿತು ವರ್ಣನೆ

ವಿಶ್ವವಾಣಿ ಕ್ಲಬ್‌ಹೌಸ್ ಬೆಂಗಳೂರು

ವಿಶ್ವವಾಣಿ Clubhouse ಸಂವಾದ-443

ವಿಶ್ವವಾಣಿ ಕ್ಲಬ್‌ಹೌಸ್ ಕೇಳುಗರಿಗಿಂದು ಹಿಮಾಲಯದ ತಪ್ಪಲಿನಲ್ಲಿ ಸಂಚರಿಸಿದ ಅನುಭವ. ರಜತ ಪರ್ವತ ಶ್ರೇಣಿಯ ಕೊರೆಯುವ ಚಳಿಯ ಹಿಮದ ಹಾದಿಯಲ್ಲಿ ತಣ್ಣನೆ ಗಾಳಿಯ ಸಿಂಚನವಾದಂತೆ ಮಾತುಗಳಲ್ಲೇ ಮೈಮರೆಸಿದ ಸಂತೋಷ್ ಕುಮಾರ್ ಮೆಹಂದಳೆಯ ಮಾತುಗಳು.

ಹಿಮಾಯಲದ ತಪ್ಪಲಿನ, ಈಶಾನ್ಯ ರಾಜ್ಯದ ಪ್ರವಾಸದ ಅನುಭವವನ್ನು ಕಟ್ಟಿಕೊಡುವ ತಮ್ಮ ಅಲೆಮಾರಿ ಡೈರಿಯ ಕುರಿತು ಕ್ಲಬ್‌ಹೌಸ್ ಕಾರ್ಯಕ್ರಮದಲ್ಲಿ ಮಾತನಾಡಿದ ಸಂತೋಷ್ ಕುಮಾರ್ ಮೆಹಂದಳೆ, ಕಾಶ್ಮೀರದ ಪ್ರಮುಖ ಸ್ಥಳಗಳನ್ನು ಕಣ್ಣಿಗೆ ಕಟ್ಟುವಂತೆ ವಿವರಿಸಿದರು.

ಈಶಾನ್ಯ ರಾಜ್ಯಗಳಲ್ಲಿ ಒದೊಂದು ಗ್ರಾಮಕ್ಕೂ ಒಂದೊಂದು ವಿಭಿನ್ನವಾದ ಪರಿಸರ, ಆಚರಣೆ ಮತ್ತು ಬುಡಕಟ್ಟು ಸಂಪ್ರದಾಯಗಳು ಜಾರಿಯಲ್ಲಿವೆ. ಇಂತಹದ್ದನ್ನೆ ಸವಿಯಲು ನಾವು ಈ ಭಾಗದ ಪ್ರವಾಸ ಮಾಡಿದಾಗ ಹಳ್ಳಿಗಳಲ್ಲಿ ಅಲೆಯುವ ಪ್ರವೃತ್ತಿಯನ್ನು ರೂಢಿಸಿಕೊಳ್ಳಬೇಕು. ಎರಡೂವರೆ ದಶಕಗಳಿಂದ ಅಲೆಯುವ ಪ್ರವೃತ್ತಿಯಿದ್ದರೂ ಇನ್ನೂ ನೋಡಬೇಕಾದ ಸಾವಿರಾರು ಪ್ರದೇಶಗಳಿವೆ. ಹೋದಲ್ಲಿ ಬಂದಲ್ಲಿ ಅನೇಕ ಕಥಾನಕಗಳು ತೆರೆದುಕೊಳ್ಳುತ್ತವೆ. ಮನುಷ್ಯ ಹುಟ್ಟು ಅಲೆಮಾರಿ, ಮನುಷ್ಯನ ಜೀವನ ಆರಂಭವಾಗಿದ್ದೆ ಅಲೆಮಾರಿತನದಿಂದ. ವಿಭಿನ್ನ ಜನಗಳು, ಪ್ರದೇಶಗಳು ನಮ್ಮಲ್ಲಿವೆ. ಇವೆಲ್ಲವನ್ನೂ ಕಟ್ಟಿಕೊಡುವ ಪ್ರಯತ್ನವನ್ನು ನಾನು ಅಲೆಮಾರಿ ಡೈರಿಯ ಮೂಲಕ ಮಾಡುತ್ತೇನೆ ಎಂದರು.

ಹಿಮಾಚಲ ಪ್ರದೇಶದಿಂದ ಕಸೋಲ್‌ನಿಂದ ಸ್ವಲ್ಪ ದೂರದಲ್ಲಿ ಕಲಗ-ಪುಲಗ ಊರುಗಳಿವೆ. ಇಲ್ಲಿ ಬಿಸಿನೀರ ಬುಗ್ಗೆಗಳಿವೆ. ಸುತ್ತಲೂ ಸೇಬಿನ ತೋಟಗಳು, ಎರಡು ಬೆಟ್ಟದ ನಡುವಿನ ಜಾಗದ ಕಣಿವೆಯಲ್ಲಿ ಮೇಲೆ ಹತ್ತಬೇಕು. ಎರಡು ತಾಸಿನ ಚಾರಣದ ನಂತರ ಸಮತಟ್ಟಾದ ಜಾಗಕ್ಕೆ ಬರುತ್ತೇವೆ. ಮೊಬೈಲ್ ಸಿಗ್ನಲ್ ಎಂಬುದಂತೂ ದೂರದ ಮಾತು. ಮೊಬೈಲ್ ಚಾರ್ಜ್ ಮಾಡುವ ವ್ಯವಸ್ಥೆಯೂ ಕಡಿಮೆ. ದೇಶದ ವಿದ್ಯಮಾನಗಳ ಬಗ್ಗೆ ತಿಳಿದುಕೊಳ್ಳುವ ವ್ಯವಸ್ಥೆಯೂ ಇಲ್ಲ. ಉಳಿಯಲು ಹೋಟೆಲ್‌ಗಳ ವ್ಯವಸ್ಥೆಯಂತೂ ಮೊದಲೇ ಇಲ್ಲ. ಹೀಗೆ ಏನೂ ಇಲ್ಲದ ಊರಾದರೂ ಇಲ್ಲಿ ಉಳಿಯಲು ಎರಡು ತಿಂಗಳು ಮೊದಲೇ ಯೋಜನೆ ರೂಪಿಸಬೇಕು ಎಂದು ಅಲ್ಲಿನ ವಾಸ್ತವ್ಯದ ವಿವರಣೆ ನೀಡಿದರು.

ಪ್ರಕೃತಿಯ ವಿಭಿನ್ನತೆಯ ದರ್ಶನ

ಟೋಲ್‌ಗಾ ಎಂಬ ಊರಿನಲ್ಲಿ ಬೆಟ್ಟದ ಮೇಲೆ ನಿಂತು ನೋಡಿದರೆ ಪ್ರಕೃತಿಯ ವಿಭಿನ್ನ ದರ್ಶನವಾಗುತ್ತದೆ. ಮೇಲೆ ಕುಳಿತು ನೋಡಿದರೆ ನಕ್ಷತ್ರಗಳ ಬೆಳಕಿನಲ್ಲಿ ಕಾಡಿನ ಮರಗಿಡಗಳು ಕಾಣುತ್ತವೆ. ಇಲ್ಲಿನ ಚಾರಣಕ್ಕೆ ಹೊರಗಿನಿಂದ ಯಾವುದೇ ಮದ್ಯ, ಗುಟ್ಕಾದಂತಹ ವಸ್ತುಗಳನ್ನು ಕೊಂಡೊಯ್ಯದಂತೆ ತಡೆಯಲಾಗುತ್ತದೆ. ಹೀಗಾಗಿ, ಈ ಪ್ರದೇಶಗಳು ಬಹಳ ಸ್ವಚ್ಛವಾಗಿ, ಶುಭ್ರವಾಗಿ ಗೋಚರಿಸುತ್ತವೆ. ಈ ಊರುಗಳಲ್ಲಿ ರಾತ್ರಿಯಾದರೆ ಗೇಟ್ ಹಾಕಿ ಬಿಡುತ್ತಾರೆ. ಆದರೆ, ಅದಕ್ಕಿಂತ ಮೊದಲೇ ಹೋಗಿ ಸೇರಿಕೊಳ್ಳಬೇಕು. ಇಲ್ಲಿ ಬೆತ್ತಲೆ ಕುಸ್ತಿಗಳು ನಡೆಯುತ್ತವೆ. ಇದು ಇಲ್ಲಿನ ಪ್ರತೀತಿ ಎಂದು ಹೇಳಲಾಗುತ್ತದೆ. ಬೆಟ್ಟದ ತುತ್ತತುದಿಯಲ್ಲಿ ನಿಂತು ನೋಡಿದರೆ ಅರ್ಧ ಮಣಿಪುರ ಕಾಣಿಸುತ್ತದೆ. ನಾಗಾ ಬುಡಕಟ್ಟು ಜನಾಂಗದವರ ವಿಭಿನ್ನ ಆಚರಣೆಗಳನ್ನು ಇಲ್ಲಿ ಕಾಣಬಹುದು ಎಂದು ವಿವರಿಸಿದರು.

ಮುಖ್ಯಾಂಶಗಳು

- ಬಾರಮುಲ್ಲಾದ ಹಿಂದಿನ ಹೆಸರು ವರಾಹಮೂಲ
- ಶ್ರೀನಗರದ ಸುತ್ತ ತರಸರ್, ಮರಸರ್ ಎಂಬ ಏಳು ಸರೋವರಗಳಿವೆ.
- ಚಾರಣಿಗರು ಮಜುಲಿ ದ್ವೀಪವನ್ನು ನೋಡಲೇಬೇಕು.
- ದಾಲ್ ಸರೋವರದಲ್ಲಿ ಮೊಘಲ್ ಶೈಲಿಯ ಉದ್ಯಾನಗಳಿವೆ
- ಕಲ್ಲಿನ ನಗರವೊಂದಿದ್ದು, ಅದರ ಹಳೆಯ ಹೆಸರು ಖನಿಶಹರ್

ತವಾಂಗ್ ಸ್ಟೋನ್ ಗಾಲ್ಯಾಂಡ್

ಚೀನಾ ಮತ್ತು ಭಾರತದ ಗಡಿಯಲ್ಲಿ ಕಲ್ಲಿನಿಂದ ಕಡೆದಿರುವ ದಾರಿಯಾಗಿದೆ. ಇಲ್ಲಿ ಚೈನಾ ಸೈನಿಕರು ಸುಲಭವಾಗಿ ಭಾರತದ ಸೈನಿಕರನ್ನು ಬ್ಲಾಕ್ ಮಾಡುತ್ತಾರೆ. ಹೀಗಾಗಿಯೇ, ಚೀನಾ ಯುದ್ದದಲ್ಲಿ ಹೆಚ್ಚು ಸೈನಿಕರನ್ನು ಕಳೆದುಕೊಳ್ಳಲಾಯಿತು. ಈ ಭಾಗದ ಹಳ್ಳಿಯಲ್ಲಿ ಸುಮಾರು ಎರಡೂವರೆ ಕಿ.ಮೀ ಜಾಗದಲ್ಲಿ ಇಡೀ ಗ್ರಾಮವೇ ಬಟಾಣಿ ಬೆಳೆಯುತ್ತಾರೆ. 40 ಮನೆಗಳಿರುವ ಸಣ್ಣ ಹಳ್ಳಿಯಾದರೂ ಸುಮಾರು 250 ಟ್ರಕ್‌ಗಳಿವೆ. ಬಟಾಣಿ ವಹಿವಾಟಿಗೆ ಅವುಗಳನ್ನು ಬಳಕೆ ಮಾಡುತ್ತಾರೆ. ಈ ಹಳ್ಳಿಯ ಎಲ್ಲ ಮನೆಯಲ್ಲಿ ಅತಿಥಿ ಸತ್ಕಾರ ಸಿಗುತ್ತದೆ. ಮೊದಲೇ ಬುಕ್ ಮಾಡಿಕೊಂಡು ಅಲ್ಲಿ ಹೋಗಿ ಉಳಿದುಕೊಳ್ಳಲು ಅವಕಾಶವಿದೆ ಎಂದು ವಿವರಿಸಿದರು.

ಭಾನುವಾರ ಕೃತಿ ಬಿಡುಗಡೆ

ಸಂತೋಷ್ ಕುಮಾರ್ ಮೆಹಂದಳೆ ಅವರ ಅಲೆಮಾರಿ ಡೈರಿಯ ಮತ್ತೊಂದು ಸಂಚಿಕೆ ಭಾನುವಾರ ಬಿಡುಗಡೆಯಾಗಲಿದೆ. ಬೆಂಗಳೂರಿನ ಮಲ್ಲೇಶ್ವರದಲ್ಲಿರುವ ಸೈನಿಕ ಭವನದಲ್ಲಿ ಸಂಜೆ 6.30ಕ್ಕೆ ಕಾರ್ಯಕ್ರಮ ನಡೆಯಲಿದೆ. ಕಾರ್ಯಕ್ರಮದಲ್ಲಿ ಮೆಹಂದಳೆ ಅವರು ಬರೆದಿರುವ ಎಲ್ಲ ಪುಸ್ತಕಗಳು ದೊರೆಯಲಿದೆ. ಇದೇ ವೇಳೆ ಪುಸ್ತಕದ ಬಗ್ಗೆ ಯಾವುದೇ ಓದುಗರಿಗೆ ಆಕ್ಷೇಪಗಳಿದ್ದರೆ, ಅದನ್ನು ವಾಪಸ್ ಪಡೆದು ಹಣವನ್ನು ವಾಪಸ್ ನೀಡುವುದಾಗಿ ಮೆಹಂದಳೆ ಘೋಷಣೆ ಮಾಡಿದರು.

ಸಭೆ/ಸಮಾರಂಭ

ಕಾರ್ಯಕ್ರಮ: ಅಂತಾರಾಷ್ಟ್ರೀಯ ಸಮ್ಮೇಳನ ಮತ್ತು ಅಗರಬತ್ತಿಗಳ ಪ್ರದರ್ಶನ.
ಮುಖ್ಯ ಅತಿಥಿ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ,ಸಚಿವ ಡಾ.ಮುರುಗೇಶ್ ನಿರಾಣಿ
ಆಯೋಜಕರು:ಅಖಿಲ ಭಾರತ ಅಗರಬತ್ತಿ ತಯಾರಕರ ಸಂಘ
ಸ್ಥಳ: ಅರಮನೆ ಮೈದಾನ, ತ್ರಿಪುರ ವಾಸಿನಿ
ಸಮಯ: ಬೆಳಗ್ಗೆ 9.30.

ಕಾರ್ಯಕ್ರಮ: ಅಂತಾರಾಷ್ಟ್ರೀಯ ಸಮ್ಮೇಳನ ಮತ್ತು ಅಗರಬತ್ತಿಗಳ ಪ್ರದರ್ಶನ.
ಮುಖ್ಯ ಅತಿಥಿ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ,ಸಚಿವ ಡಾ.ಮುರುಗೇಶ್ ನಿರಾಣಿ
ಆಯೋಜಕರು:ಅಖಿಲ ಭಾರತ ಅಗರಬತ್ತಿ ತಯಾರಕರ ಸಂಘ
ಸ್ಥಳ: ಅರಮನೆ ಮೈದಾನ, ತ್ರಿಪುರ ವಾಸಿನಿ
ಸಮಯ: ಬೆಳಗ್ಗೆ 9.30.

ಕಾರ್ಯಕ್ರಮ: ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಅಂತಾರಾಷ್ಟ್ರೀಯ ಸಮ್ಮೇಳನ.
ಮುಖ್ಯ ಅತಿಥಿ: ಐಐಎಸ್ಸಿ ಮಾಜಿ ಅಧ್ಯಕ್ಷ ಪ್ರೊ.ಪಿ.ಬಲರಾಮ್, ಶಿಕ್ಷಣ ತಜ್ಞ ಡಾ. ಗುರುರಾಜ ಕರಜಗಿ, ಎಂ.ಆರ್.ಸೀತಾರಾಮ್.
ಸ್ಥಳ: ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಗೋಕುಲ ನಗರ.
ಸಮಯ: ಬೆಳಗ್ಗೆ 10.30.

ಕಾರ್ಯಕ್ರಮ : ಅಂತಾರಾಷ್ಟ್ರೀಯ ರಬ್ಬರ್ ಸಮಾವೇಶ.
ಮುಖ್ಯ ಅತಿಥಿ : ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ್.
ಸ್ಥಳ: ಶೆರಟನ್ ಗ್ರ್ಯಾಂಡ್, ವೈಟ್ ಫೀಲ್ಡ್
ಸಮಯ: ಬೆಳಗ್ಗೆ 9.30

ಕಾರ್ಯಕ್ರಮ: ದಿ.ವಿ.ಎಸ್.ಕೃಷ್ಣಯ್ಯ ಜನ್ಮಶತಮಾನೋತ್ಸವ.
ಮುಖ್ಯ ಅತಿಥಿ: ಪೇಜಾವರ ಮಠದ ಶ್ರೀವಿಶ್ವಪ್ರಸನ್ನ ತೀರ್ಥರು, ಸಚಿವ ವಿ.ಸೋಮಣ್ಣ, ಮಾಜಿ ಸಚಿವ ಪಿ.ಜಿ.ಆರ್.ಸಿಂಧ್ಯಾ, ಮಾಜಿ ಸಭಾಪತಿ ಬಸವರಾಜ ಹೊರಟ್ಟಿ.
ಸ್ಥಳ: ಕೆ. ಆರ್ ರಸ್ತೆ, ಗಾಯನ ಸಮಾಜ
ಸಮಯ: ಸಂಜೆ 5.30.

ಕಾರ್ಯಕ್ರಮ : ಡಿಜಿಟಲ್ ಜೀವನ ಪ್ರಮಾಣ ಪತ್ರ ಪ್ರಚಾರ ಅಭಿಯಾನ.
ಆಯೋಜಕರು: ಎಸ್‌ಬಿಐ ಹಾಗೂ ಭಾರತ ಸರಕಾರ ಪಿಂಚಣಿದಾರರ ಕಲ್ಯಾಣ ಇಲಾಖೆ.
ಸ್ಥಳ: ಎಐ ಕಾಂಪ್ಲೆಕ್ಸ್, ಮೈಸೂರು ಬ್ಯಾಂಕ್ ಸರ್ಕಲ್.
ಸಮಯ: ಬೆಳಗ್ಗೆ 10.

ಕಾರ್ಯಕ್ರಮ : ಸೈನ್ಸ್ ಲೆಕ್ಚರ್ ವರ್ಕ್‌ಶಾಪ್
ಸ್ಥಳ: ವಿಜಯಾ ಕಾಲೇಜು, ಬಸವನಗುಡಿ
ಸಮಯ: ಬೆಳಗ್ಗೆ 9.

ಕಾರ್ಯಕ್ರಮ: ವ್ಯಂಗ್ಯಚಿತ್ರಗಳ ಪ್ರದರ್ಶನ.
ಆಯೋಜಕರು: ಭಾರತೀಯ ವ್ಯಂಗ್ಯ ಚಿತ್ರಕಾರರ ಸಂಸ್ಥೆ.
ಸ್ಥಳ: ಎಂ.ಜಿ.ರಸ್ತೆ, ಟ್ರಿನಿಟಿ ವೃತ್ತ, ಭಾರತೀಯ ವ್ಯಂಗ್ಯ ಚಿತ್ರಗ್ಯಾಲರಿ.
ಸಮಯ: ಬೆಳಗ್ಗೆ 11.

ಕಾರ್ಯಕ್ರಮ: ರಾಷ್ಟ್ರೀಯ ಸೇವಾ ಯೋಜನೆ ವಿಶೇಷ ಶಿಬಿರದ ಸಮಾರೋಪ ಸಮಾರಂಭ.
ಮುಖ್ಯ ಅತಿಥಿ: ಪ್ರೊ ಪ್ರತಾಪ್ ಲಿಂಗಯ್ಯ, ಇಂದಿರಾ ಕೃಷ್ಣಪ್ಪ., ಡಾ.ಬೈರಮಂಗಲ ರಾಮೇಗೌಡ. ರಾಜು ಚಂದ್ರಶೇಖರ್. ಜೀರಿಗೆ ಲೋಕೇಶ್.
ಆಯೋಜಕರು: ಕರ್ನಾಟಕ ಗಾಂಧಿ ಸ್ಮಾರಕ ನಿಧಿ.
ಸ್ಥಳ: ಗಾಂಧಿಭವನ ಕಸ್ತೂರಿ ಬಾ ಸಭಾಂಗಣ.
ಸಮಯ: ಮಧ್ಯಾಹ್ನ 2.30.

ಕಾರ್ಯಕ್ರಮ: 5ನೇ ವರ್ಷದ ಪದವಿ ಪ್ರದಾನ ಸಮಾರಂಭ.
ಮುಖ್ಯ ಅತಿಥಿ: ಬೆಂ.ಉತ್ತರ ವಿವಿ ಉಪ ಕುಲಪತಿ ಡಾ. ನಿರಂಜನ ವಾನಳ್ಳಿ, ಡಾ.ಟಿ.ಸೋಮಶೇಖರ್.
ಆಯೋಜಕರು: ಇಂಡಿಯನ್ ಅಕಾಡೆಮಿ ಡಿಗ್ರಿ ಕಾಲೇಜು.
ಸ್ಥಳ: ಇಂಡಿಯನ್ ಅಕಾಡೆಮಿ ಕಾಲೇಜು ಆವರಣ.
ಸಮಯ: ಮಧ್ಯಾಹ್ನ 2.30.

ಕಾರ್ಯಕ್ರಮ: ಕಾಲ ವಿಷಯ ಕುರಿತು ಡಾ.ಎಸ್. ರಂಗನಾಥ್ ಅವರಿಂದ ಉಪನ್ಯಾಸ.
ಸ್ಥಳ: ಜಯನಗರ 9ನೇ ಬಡಾವಣೆ.
ಸಮಯ: ಸಂಜೆ 6.30.

ಕಾರ್ಯಕ್ರಮ: ಕುವೆಂಪು ಅವರ ಸ್ಮಶಾನ ಕುರುಕ್ಷೇತ್ರ ನಾಟಕ' ಒಂದು ವಿಶ್ಲೇಷಣೆ. ಉಪನ್ಯಾಸ.
ಮುಖ್ಯ ಅತಿಥಿ: ಕಾಂತ್ರಾಜ್ ಕಸ್ತೂರಿ ತಿಮ್ಮನಹಳ್ಳಿ, ಎಂ.ಸಿ.ನರೇಂದ್ರ, ಜಗದೀಶ್ ರೆಡ್ಡಿ.
ಸ್ಥಳ: ಎಚ್.ಸಿದ್ದಯ್ಯ ರಸ್ತೆ, ಹೊಂಬೇಗೌಡನಗರ, ಕನ್ನಡ ಯುವಜನ ಸಂಘ.
ಸಮಯ: ಸಂಜೆ 6.30.

ಇಂದಿನಿಂದ 2 ದಿನಗಳ ಕಾಲ ಬಿಜಿಎಸ್ ಸಂಸ್ಥಾಪಕರ ದಿನ

ಬೆಂಗಳೂರು: ನಗರದ ಕೆಂಗೇರಿ ಬಳಿ ಇರುವ ಬಿಜಿಎಸ್ ಆರೋಗ್ಯ ಶಿಕ್ಷಣ ಕ್ಯಾಂಪಸ್‌ನಲ್ಲಿ ಗುರುವಾರದಿಂದ (ನ. 24) ಎರಡು ದಿನಗಳ ಕಾಲ 14ನೇ ಬಿಜಿಎಸ್ ಸಂಸ್ಥಾಪಕರ ದಿನಾಚರಣೆ ಹಾಗೂ ಬಿಜಿಎಸ್ ಉತ್ಸವ ಹಮ್ಮಿಕೊಳ್ಳಲಾಗಿದೆ.

ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ ಗುರುವಾರ ಬೆಳಗ್ಗೆ 10.30ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬಿಜಿಎಸ್ ಸಂಸ್ಥಾಪಕರ ದಿನ ಮತ್ತು ಬಿಜಿಎಸ್ ಉತ್ಸವ ಉದ್ಘಾಟಿಸುವರು. ಬಿಜಿಎಸ್ ಮತ್ತು ಬಿಜಿಎಸ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಟ್‌ನ ವ್ಯವಸ್ಥಾಪಕ ನಿರ್ದೇಶಕ ಪ್ರಕಾಶನಾಥ ಸ್ವಾಮೀಜಿ, ಸಚಿವರಾದ ಆರ್.ಅಶೋಕ್, ಎಸ್.ಟಿ.ಸೋಮಶೇಖರ್, ಕೇಂದ್ರ ಆರೋಗ್ಯ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಅನಿಲ್ ಕುಮಾರ್ ರದಾಡಿಯಾ, ನಟಿ ರಮ್ಯಾ ಪಾಲ್ಗೊಳ್ಳುವರು.

ನ. 25ರ ಶುಕ್ರವಾರ ಬೆಳಗ್ಗೆ 9 ಗಂಟೆಗೆ ಬಿಜಿಎಸ್ ಉತ್ಸವ ಮತ್ತು ಅಡ್ವಾನ್ಸ್‌ಡ್ ಸ್ಕಿಲ್ ಲ್ಯಾಬ್‌ಅನ್ನು ಈಶ ಫೌಂಡೇಷನ್‌ನ ಸಂಸ್ಥಾಪಕ ಸದ್ಗುರು ಜಗ್ಗಿ ವಾಸುದೇವ್ ಉದ್ಘಾಟಿಸುವರು. ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ, ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ವಿಟಿಯು ಕುಲಪತಿ ಡಾ. ವಿದ್ಯಾಶಂಕರ್ ಎಸ್., ಭಾಗವಹಿಸಲಿದ್ದಾರೆ.

ಶುಕ್ರವಾರ ಮಧ್ಯಾಹ್ನ 3.30ಕ್ಕೆ ಸಿಎಸ್ ಉತ್ಸವದ ಸಮಾರೋಪ ಸಮಾರಂಭ ನಡೆಯಲಿದ್ದು, ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಅಧ್ಯಕ್ಷತೆ ವಹಿಸುವರು. ಶಾಲಾ ಶಿಕ್ಷಣ ಸಚಿವ ಬಿ.ಸಿ.ನಾಗೇಶ್, ಮಂಡ್ಯ ಸಂಸದೆ ಸುಮಲತಾ ಅಂಬರೀಶ್ ಪಾಲ್ಗೊಳ್ಳುವರು.

ಪತಿಯ ಅನೈತಿಕ ಸಂಬಂಧಕ್ಕೆ ಬೇಸತ್ತು ಮಹಿಳೆಯ ಆತ್ಮಹತ್ಯೆ

ಬೆಂಗಳೂರು: ಹನ್ನೊಂದು ತಿಂಗಳಷ್ಟೇ ತನ್ನನ್ನು ವಿವಾಹವಾದ ಪತಿಯ ಅನೈತಿಕ ಸಂಬಂಧಕ್ಕೆ ಬೇಸತ್ತು ಪತ್ನಿ ಆತ್ಮಹತ್ಯೆ ಮಾಡಿಕೊಳ್ಳುವೆ ಎಂದು ಸಂದೇಶ ಕಳುಹಿಸಿದ್ದಳು. ಅದಕ್ಕಾತ ಗುಡ್‌ಬೈ ಎಂದು ಪ್ರತಿಕ್ರಿಯಿಸಿದ್ದ. ನೊಂದ ಪತ್ನಿ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಳು.

ಈ ಘಟನೆ ನಡೆದಿರುವುದು ಬೆಂಗಳೂರಿನ ರಾಮಮೂರ್ತಿ ನಗರದ ರಿಚರ್ಡ್ ಗಾರ್ಡನ್‌ನಲ್ಲಿ. ಅಭಿಷೇಕ್ ಎಂಬಾತನ ಪತ್ನಿ ಶ್ವೇತಾ (27) ನೇಣಿಗೆ ಶರಣಾದ ದುರ್ದೈವಿ. ಪ್ರಕರಣಕ್ಕೆ ಸಂಬಂಧಿಸಿದಂತೆ ಪತಿ ಅಭಿಷೇಕ್ ವಿರುದ್ಧ ಶ್ವೇತಾಳ ಪೋಷಕರು ದೂರು ನೀಡಿದ್ದಾರೆ.

ಐಬಿಎಂ ಕಂಪನಿ ಉದ್ಯೋಗಿಯಾಗಿದ್ದ ಶ್ವೇತ, ಟಿಸಿಎಸ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಅಭಿಷೇಕ್‌ನನ್ನು ಮದುವೆಯಾಗಿದ್ದಳು. ಮದುವೆಗೆ ಮುನ್ನ ಅಭಿಷೇಕ್ ಬೇರೆ ಯುವತಿ ಜತೆ ಸಂಬಂಧ ಹೊಂದಿದ್ದು, ಈ ವಿಚಾರ ಗೊತ್ತಾಗಿ ಶ್ವೇತಾ ಗಲಾಟೆ ಮಾಡಿದ್ದಳು. ಬಳಿಕ ರಾಜಿ ಪಂಚಾಯಿತಿ ನಡೆದು ಇಬ್ಬರೂ ಒಟ್ಟಿಗೆ ಜೀವನ ಆರಂಭಿಸಿದ್ದರು. ಆದರೂ ಅನ್ಯ ಯುವತಿ ಜತೆ ಅಭಿಷೇಕ್ ಸಂಬಂಧ ಮುಂದುವರಿಸಿದ್ದ. ಅಲ್ಲದೆ, ಇತ್ತೀಚೆಗೆ ಕೊಯಮತ್ತೂರಿಗೆ ಹೋಗುವುದಾಗಿ ಹೇಳಿ ದೆಹಲಿಗೆ ತೆರಳಿ ಯುವತಿಯನ್ನು ಭೇಟಿಯಾಗಿದ್ದ. ಇದನ್ನು ತಿಳಿದ ಶ್ವೇತಾ ತನ್ನ ಪತಿ ಜತೆ ಜಗಳ ವಾಡಿದ್ದಳು. ಇದಾದ ಬಳಿಕ ಶ್ವೇತಾ ತನ್ನ ಪತಿಗೆ, ನಾನು ಸಾಯುತ್ತೇನೆ, ಗುಡ್‌ಬೈ ಎಂದು ಸಂದೇಶ ಕಳುಹಿಸಿದ್ದಳು. ಇದಕ್ಕೆ ಅಭಿಷೇಕ್ ಕೂಡ ಗುಡ್‌ಬೈ ಎಂದು ಪ್ರತಿಕ್ರಿಯಿಸಿದ್ದ. ಹೀಗಾಗಿ ನೊಂದ ಶ್ವೇತಾ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಳು. ಈ ಕುರಿತಂತೆ ರಾಮಮೂರ್ತಿ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರೌಡಿಗಳ ಮನೆ ಮೇಲೆ ಸಿಸಿಬಿ ದಿಢೀರ್ ದಾಳಿ

ಬೆಂಗಳೂರು: ಅಪರಾಧ ಕೃತ್ಯಗಳನ್ನು ಹತ್ತಿಕ್ಕಿ ರೌಡಿ ಚಟುವಟಿಕೆಗಳನ್ನು ಮಟ್ಟ ಹಾಕಲು ರೌಡಿಗಳ ಮೇಲೆ ದಿಢೀರ್ ದಾಳಿ ನಡೆಸಿರುವ ಸಿಸಿಬಿ ಪೊಲೀಸರು ನಗರದಲ್ಲಿ 86 ರೌಡಿಗಳಿಗೆ ಶಾಕ್ ನೀಡಿದ್ದಾರೆ. ರೌಡಿ ಚಟುವಟಿಕೆಗಳಲ್ಲಿ ಸಕ್ರಿಯವಾಗಿರುವ 86 ರೌಡಿಗಳ ಮನೆಗಳ ಮೇಲೆ ಮಂಗಳವಾರ ಮಧ್ಯರಾತ್ರಿ ಸಿಸಿಬಿ ಪೊಲೀಸರು ದಾಳಿ ನಡೆಸಿದ್ದಾರೆ.

ನಗರದ ವಿಭಾಗಗಳ ಠಾಣಾ ವ್ಯಾಪ್ತಿಗಳಲ್ಲಿ ಐವರು ಎಸಿಪಿ, 20 ಇನ್‌ಸ್ಪೆಕ್ಟರ್‌ಗಳ ನೇತೃತ್ವದಲ್ಲಿ ನಗರದ ಪ್ರಮುಖ ರೌಡಿಗಳ ಮನೆಗಳ ಮೇಲೆ ರೇಡ್ ನಡೆಸಿ ಪರಿಶೀಲನೆ ನಡೆಸಲಾಗಿದೆ. ಸೈಕಲ್ ರವಿ, ವಿಲ್ಸನ್ ಗಾರ್ಡನ್ ನಾಗನ ಮನೆ ಮೇಲೂ ದಾಳಿ ನಡೆಸಿದ್ದು ಸಿಸಿಬಿ ದಾಳಿ ವೇಳೆ ಇಬ್ಬರು ರೌಡಿಗಳು ಮನೆಗಳಲ್ಲಿ ಇರಲಿಲ್ಲ. ದಾಳಿ ವೇಳೆ ಕುಖ್ಯಾತ ರೌಡಿಗಳಾದ ಕೋತಿರಾಮ, ಆರ್.ಟಿ.ನಗರದ ವೆಂಕಟೇಶ್ ಸೇರಿ 26 ಮಂದಿ ರೌಡಿಗಳನ್ನು ಸಿಸಿಬಿ ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ.

ಕಾನೂನು ಬಾಹಿರ ಚಟುವಟಿಕೆಯಲ್ಲಿ ಭಾಗಿಯಾಗದಂತೆ ಉತ್ತಮ ಜೀವನ ನಡೆಸಬೇಕು ಅಪರಾಧ ಕೃತ್ಯಗಳಲ್ಲಿ ಭಾಗಿಯಾದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು. ಕೆಲವು ರೌಡಿಶೀಟರ್‌ಗಳು ಬಿಬಿಎಂಪಿ ಚುನಾವಣೆ ತಯಾರಿಯಲ್ಲಿದ್ದು ಅಪರಾಧ ಚಟುವಟಿಕೆಗಳಲ್ಲಿ ತೊಡಗಿರುವ ರೌಡಿಗಳ ಮನೆ ಮೇಲೆ ದಾಳಿ ಮಾಡಲಾಗಿದೆ ಎಂದು ಎಂದು ಸಿಸಿಬಿ ಜಂಟಿ ಪೊಲೀಸ್ ಆಯುಕ್ತ ಡಾ.ಎಸ್.ಡಿ.ಶರಣಪ್ಪ ತಿಳಿಸಿದ್ದಾರೆ.

ಮಾರಕಾಸ್ತ್ರಗಳು ಪತ್ತೆ

ಸಿಸಿಬಿ ದಾಳಿ ವೇಳೆ ರೌಡಿಶೀಟರ್ ಮನೆಗಳಲ್ಲಿ ಮಾರಕಾಸ್ತ್ರಗಳು ಪತ್ತೆಯಾಗಿವೆ. ಸಿದ್ದಾಪುರ ಠಾಣಾ ವ್ಯಾಪ್ತಿಯ ರೌಡಿಶೀಟರ್ ಕುಳ್ಳ ರಿಜ್ವಾನ್ ಶಿಷ್ಯ ಸ್ಟಾರ್ ನವೀನ್ ಮನೆಯಲ್ಲಿ ಡ್ಯಾಗರ್ ಪತ್ತೆಯಾಗಿದ್ದು ಸಿಸಿಬಿ ದಾಳಿ ವೇಳೆ ಸ್ಟಾರ್ ನವೀನ್ ಪರಾರಿಯಾಗಿದ್ದಾನೆ. ವಿಜಯನಗರ ಠಾಣಾ ವ್ಯಾಪ್ತಿಯಲ್ಲೂ ಸಿಸಿಬಿ ದಾಳಿ ನಡೆದಿ ಪರಿಶೀಲನೆ ನಡೆಸಿದೆ. ಈ ವೇಳೆ ವಿಜಯನಗರ ರೌಡಿಶೀಟರ್ ರಾಘವೇಂದ್ರ ಮನೆಯಲ್ಲಿ ಎರಡು ಲಾಂಗ್‌ಗಳು ಪತ್ತೆಯಾಗಿವೆ.

ದ್ವಿಲೋಹ ಪ್ರತಿಮಾಶಾಸ್ತ್ರ ಕಾರ್ಯಾಗಾರ ಆಯೋಜನೆ

ಬೆಂಗಳೂರು: ದ್ವಿಲೋಹ ಪ್ರತಿಮಾಶಾಸ್ತ್ರ ಸಾಂಪ್ರದಾಯಿಕ ಕಲೆ. ನಮ್ಮಲ್ಲಿ ಈ ಕಲೆ ವಿನಾಶದ ಅಂಚಿಗೆ ಬಂದು ತಲುಪುತ್ತಿದೆ. ಈ ನಿಟ್ಟಿನಲ್ಲಿ ಇಂದಿರಾಗಾಂಧಿ ರಾಷ್ಟ್ರೀಯ ಕಲಾಕೇಂದ್ರ ಕಲೆಯನ್ನು ಉಳಿಸುವ ನಿಟ್ಟಿನಲ್ಲಿ ಕಾರ್ಯಾಗಾರ ಆಯೋಜಿಸಿದೆ. ಮೂರು ದಿನಗಳ ಕಾಲ ನಡೆಯಲಿರುವ ಈ ಕಾರ್ಯಾಗಾರದಲ್ಲಿ ಅರ್ಧನಾರೀಶ್ವರ ಹಾಗೂ ನಾಟ್ಯ ಸರಸ್ವತಿ ದೇವಿಯ ಲೋಹದ ಪ್ರತಿಮೆಗಳನ್ನು ಸಾಂಪ್ರದಾಯಿಕ ಪದ್ಧತಿಯನ್ನು ಅನುಸರಿಸಿ ಎರಕಹೊಯ್ದು ರಚಿಸಲಾಗುವುದು. ಭಾರತೀಯ ಲೋಹಶಾಸ್ತ್ರ ಹಾಗೂ ವಿಜ್ಞಾನ ತಂತ್ರಗಾರಿಕೆಯನ್ನು ಸಾಂಪ್ರದಾಯಿಕ ರಚನೆಯ ವಿಧಾನವು ಇಂದಿನ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ತಿಳಿಸಿಕೊಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ನೀವು ಬನ್ನಿ, ನಿಮ್ಮ ಮಕ್ಕಳನ್ನು ಕರೆತನ್ನಿ. ಈ ಪಾರಂಪಾರಿಕ ಕಲೆಯನ್ನು ಉಳಿಸಿ ಬೆಳೆಸಿ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಸರಕಾರ, ಬಿಬಿಎಂಪಿಗೆ ನೋಟಿಸ್

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ಹುಳಿಮಾವು ವಾರ್ಡ್‌ನ ಕೆಲವು ಪ್ರದೇಶಗಳನ್ನು ಬೊಮ್ಮನಹಳ್ಳಿ ಮತ್ತು ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರಗಳಿಗೆ ಸೇರಿಸಿರುವ ಕ್ರಮ ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲಾಗಿದ್ದು, ಸರಕಾರ ಮತ್ತು ಬಿಬಿಎಂಪಿಗೆ ನೋಟಿಸ್ ಜಾರಿಯಾಗಿದೆ.

ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಶಾಸಕ ಎಂ.ಸತೀಶ್ ರೆಡ್ಡಿ ಮತ್ತಿತರರು ಸಲ್ಲಿಸಿರುವ ಮೇಲ್ಮನವಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಅವರ ನೇತೃತ್ವದ ವಿಭಾಗೀಯ ಪೀಠ ನೋಟಿಸ್ ಜಾರಿಗೊಳಿಸಿ ಆದೇಶಿಸಿದೆ.

ಬೊಮ್ಮನಹಳ್ಳಿ ವಿಧಾನ ಸಭಾ ಕ್ಷೇತ್ರಕ್ಕೆ ಹುಳಿಮಾವು ಸೇರಿದಂತೆ ಹಿಂದೆ ಇದ್ದ 14 ವಾರ್ಡ್‌ಗಳ ಜತೆಗೆ ಹೆಚ್ಚುವರಿಯಾಗಿ 6 ವಾರ್ಡ್‌ಗಳನ್ನು ಸೇರ್ಪಡೆಗೊಳಿಸಲಾಗಿದೆ. ಆದರೆ, ಹುಳಿಮಾವು ವಾರ್ಡ್‌ಗೆ ಸೇರಿದ ಅಕ್ಷಯ ಗಾರ್ಡನ್, ಸತ್ಯಸಾಯಿ, ಶಿರಡಿ ಸಾಯಿ ನಗರ, ವಿಜಿಪಿ ಲೇಔಟ್ ಮತ್ತಿತರೆ ಪ್ರದೇಶಗಳನ್ನು ಬೆಂಗಳೂರು ದಕ್ಷಿಣ ವಿಧಾನ ಸಭಾ ಕ್ಷೇತ್ರದೊಂದಿಗೆ ಹಂಚಿಕೆ ಮಾಡಲಾಗಿದೆ. ಇದು ವಾರ್ಡ್ ಮರು ವಿಂಗಡಣೆಗೆ ಸರಕಾರ ಹೊರಡಿಸಿದ ಮಾರ್ಗಸೂಚಿಗಳ ಉಲ್ಲಂಘನೆಯಾಗಿದೆ. ಆದ್ದರಿಂದ ವಾರ್ಡ್ ಮರು ವಿಂಗಡಣೆ ಅಧಿಸೂಚನೆ ರದ್ದುಪಡಿಸಬೇಕು. ಹುಳಿಮಾವು ವಾರ್ಡ್ ಮರು ವಿಂಗಡಣೆಯನ್ನು ಮರು ಪರಿಶೀಲಿಸುವಂತೆ ಸರಕಾರಕ್ಕೆ ನಿರ್ದೇಶಿಸಬೇಕು ಎಂದು ಮೇಲ್ಮನವಿಯಲ್ಲಿ ಕೋರಲಾಗಿದೆ.

ಕುಖ್ಯಾತ ದರೋಡೆಕೋರ ಬಂಧನ

ಬೆಂಗಳೂರು: ಮಹಜರು ಮಾಡಲು ಕರೆದೊಯ್ದ ಪೊಲೀಸರ ಮೇಲೆ ಸಿಮೆಂಟ್ ಇಟ್ಟಿಗೆಯಿಂದ ಹಲ್ಲೆ ನಡೆಸಿ ಪರಾರಿಯಾಗಲು ಯತ್ನಿಸಿದ ಕುಖ್ಯಾತ ದರೋಡೆಕೋರ ಯೋಗಾನಂದ ಅಲಿಯಾಸ್ ನೈಟ್‌ಶಿಫ್ಟ್ ಯೋಗಿಗೆ ನೆಲಮಂಗಲ ಪೊಲೀಸರು ಗುಂಡು ಹೊಡೆದು ಬಂಧಿಸಿದ್ದಾರೆ.

ಕಾಲಿಗೆ ಪೊಲೀಸರ ಗುಂಡೇಟು ತಗುಲಿರುವ ಯೋಗಾನಂದ ಅಲಿಯಾಸ್ ನೈಟ್‌ಶಿಫ್ಟ್ ಯೋಗಿ ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಕುಖ್ಯಾತ ದರೋಡೆಕೋರನಾಗಿದ್ದ ಯೋಗಾನಂದನನ್ನು ಬಂಧಿಸಿದ ನೆಲಮಂಗಲ ಪೊಲೀಸರು ಮಹಜರು ಮಾಡಲು ದಾನೋಜಿಪಾಳ್ಯ ರಸ್ತೆಗೆ ಕರೆದುಕೊಂಡು ಹೋದ ವೇಳೆ ತಪ್ಪಿಸಿಕೊಳ್ಳಲು ಯತ್ನಿಸಿದ್ದಾನೆ. ಬೆನ್ನಟ್ಟಿ ಹೋದ ಪೇದೆ ಹನುಮಂತ ಹಿಪ್ಪರಗಿ ಸೇರಿ ಸಿಬ್ಬಂದಿಯ ಮೇಲೆ ಹಾಲೋಬ್ರಿಕ್ಸ್‌ನಿಂದ ಹಲ್ಲೆ ನಡೆಸಿದ್ದು ಈ ಆತ್ಮರಕ್ಷಣೆಗಾಗಿ ನೆಲಮಂಗಲ ಟೌನ್ ಇನ್‌ಸ್ಪೆಕ್ಟರ್ ಶಶಿಧರ್ ಗಾಳಿಯಲ್ಲಿ ಗುಂಡುಹಾರಿಸಿ ಪೊಲೀಸರು ಎಚ್ಚರಿಸಿದರೂ ಮತ್ತೆ ಹಲ್ಲೆಗೆ ಮುಂದಾದಾಗ ಮತ್ತೊಂದು ಸುತ್ತು ಗುಂಡು ಹಾರಿಸಿದ್ದು ಅದು ಕಾಲಿಗೆ ತಗುಲಿ ಸ್ಥಳದಲ್ಲಿಯೇ ಕುಸಿದು ಬಿದ್ದಿದ್ದಾನೆ. ಕೂಡಲೇ ಆತನನ್ನು ವಶಕ್ಕೆ ತೆಗೆದುಕೊಂಡು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ ಹಲ್ಲೆಯಿಂದ ಗಾಯಗೊಂಡ ಕಾನ್‌ಸ್ಟೇಬಲ್ ಹನುಮಂತ ಹಿಪ್ಪರಗಿ ಅವರ ಕೈಗಳಿಗೆ ಗಾಯವಾಗಿದ್ದು ಅವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ. ದರೋಡೆಕೋರ ಯೋಗಾನಂದನ ಮೇಲೆ ಕೊಲೆ ಸುಲಿಗೆ ಬೆದರಿಕೆ ಸೇರಿದಂತೆ 18 ಪ್ರಕರಣಗಳು ದಾಖಲಾಗಿವೆ.